doc-40-
T.P-2

(1)

R No KRNN 12

19 - 11 - 1974

in ★ ★ ★ ★ ★

58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (3 ಪೈಸೆ

ಕರ್ನಾಟಕ ಕೇಂದ್ರವನ್ನು ನೆರವು ಕೇಳಿದೆ

ಮೈಸೂರು ನಗರಾಭಿವೃದ್ಧಿ ಮಂಡಲಿ ಅಧ್ಯಕ್ಷರು ಶ್ರೀ ಬಿ ಎಸ್ ಕೆಂಗೇಗೌಡರವರು ಇತ್ತೀಚಿನ ಪತ್ರಿಕಾ ಹೇಳಿಕೆಯಲ್ಲಿ ಈ ರೀತಿ ತಿಳಿಸಿರುವರು—

ನಗರಾಭಿವೃದ್ಧಿ ಮಂಡಲಿ ಕಟ್ಟಡದಲ್ಲಿ ಒಂದು ಎಕ್ಸ್‌ಟೆನ್ಷನ್‌ಕೌಂಟರ್ ತೆಡೆಸುತ್ತಿರುವ ವಿಜಯಾ ಬ್ಯಾಂಕಿನ ಮ್ಯಾನೇಜರು ತಾ॥ 15-11-74 ರಂದು ಮಧ್ಯಾಹ್ನ ನನ್ನಲ್ಲಿಗೆ ಬಂದು, ಶ್ರೀ ಎಸ್. ನಾರಾಯಣರಾವ್‌ರ ಹೆಸರಿಗೆ ಕೊಡಲಾದುದೆಂದು ಭಾವಿಸಲಾದ 29000 ರೂ ಗಳ ತಾ॥ 8-11-74 ಚೆಕ್ ನಂ. 970239 ರಲ್ಲಿ ನನ್ನ ಸಹಿಯಲ್ಲಿ ಸ್ವಲ್ಪ ವೆತ್ಯಾಸವಿರುವುದನ್ನು ನನ್ನ ಗಮನಕ್ಕೆ ತಂದರು. ನನ್ನ ಕಛೇರಿಯಲ್ಲಿ ಪರಿಶೀಲನಾ ನಂತರ, ಆ ಚೆಕ್ ಹಾಳೆ ಮತ್ತು ಅದರ ಉಳಿಸಿಕೊಳ್ಳುವ ಭಾಗವೂ ಚೆಕ್‌ಬುಕ್‌ನಲ್ಲಿ ಇಲ್ಲದಿರುವುದನ್ನು ಕಂಡೆನು ಆ ಚೆಕ್‌ಗೆ ಹಣ ಪಾವತಿ ನಿಲ್ಲಿಸುವಂತೆ ವಿಜಯ ಬ್ಯಾಂಕ್‌ಗೆ ನನ್ನ ತಾ॥ 15-11-74 ರ ಪತ್ರ. ಎ4. ಎಫ್ ಸಿಎಲ್ 674/74-75 ರ ಪತ್ರದಲ್ಲಿ ವಿನಂತಿಸಿದೆನು

ತಕ್ಷಣ ಮ್ಯಾನೇಜರ್ ಶ್ರೀ ಎಚ್. ಎಂ ನಾಗಪ್ಪನವರಿಗೆ ಮೇಲ್ಕಂಡ ಚೆಕ್ ಸಂಶಯಾಸ್ಪದ ನಾದಕ್ಕೆ ಬಗ್ಗೆ ಚೆಕ್ ಮಾಡಲೂ, ಅಂತಹ ಆಕ್ರಮಗಳು ಮತ್ತಾವುದಾದರೂ ಚೆಕ್‌ಬುಕ್‌ಗಳಲ್ಲಿವೆಯೇ ಎಂಬುದನ್ನು ಕಂಡುಹಿಡಿಯಲು ಅಜ್ಞೆ ಕೊಟ್ಟೆ. ತಾ॥ 16-11-74 ರಲ್ಲಿ ತಾ॥ 1-1-74 ರಿಂದ 30-7-74 ತನಕ ಕ್ಯಾಷ್ ಬುಕ್ ಚೆಕ್ ಹಾಳೆಗಳನ್ನು ಮ್ಯಾನೇಜರು ಹೋಲಿಸಿ ನೋಡಿ 13 ಚೆಕ್ ಹಾಳೆಗಳು ಮಾಯವಾಗಿರುವುದನ್ನು ಕಂಡರು ; ವಿಷಯ ಅನಧಿಗೂ ಚೆಕ್ ಮಾಡಿ ರಿಪೋರ್ಟು ಅರ್ಪಿಸಲು ತಿಳಿಸಲಾಯಿತು

ತದನಂತರ ನಾನು ಕೂಡಲೇ ಪೋಲೀಸು ಸೂಪರಿಂಟೆಂಡೆಂಟ್ ಶ್ರೀ ಸಿ ಡಿನಕರ್‌ರೊಡನೆ ಸಂಪರ್ಕಗೊಂಡು ಚೆಕ್ಕುಗಳು ಮಾಯವಾಗಿರುವುದನ್ನು ತಿಳಿಸಿ, ತನಿಖೆ ನಡೆಸಲೂ, ಈ ವಿಷಯದಲ್ಲಿ ಕೂಡಲೇ ಕ್ರಮಕ್ಕೆ ಗೊಳ್ಳಲು ಅಪಿತ ದೂರು ಕೊಟ್ಟೆ.

ಮೇಲ್ಕಂಡ ಎಲ್ಲ ವಿಷಯಗಳನ್ನೂ ನಾನು ಬೆಂಗಳೂರು ಕರ್ನಾಟಕ ಸರಕಾರಕ್ಕೆ ತಿಳಿಸಿರುತ್ತೇನೆ.

★

ಪ್ರಧಾನಿಯವರ ಮಧ್ಯಸ್ಥಿಕೆಗೆ ಮನವಿ

ಮದರಾಸು— ತಂಜಾವೂರು ಜಿಲ್ಲೆಯ ಭತ್ತದ ಬೆಳೆಯನ್ನು ಕಾವೇರಿ ಡಲ್ಟಾ ಕರ್ನಾಟಕ ಸರಕಾರವು ಕಬಿನಿ ಡ್ಯಾಂನಿಂದ 13 ಟಿಎಂಸಿ ಅಡಿ ನೀರು ಬಿಡುವಂತೆ ಶ್ರೀ ರಿಸಲು ಪ್ರಧಾನಿ ಇಂದಿರಾ ಗಾಂಧಿಯವರ ಮಧ್ಯಸ್ಥಿಕೆಗೆ ತಮಿಳುನಾಡು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಮನವಿ ಮಾಡಿಕ್ಕಾರೆ

●

ಭೂಪೇಶಗುಪ್ತರ ಆಕ್ರೋಶ

ನವದೆಹಲಿ— ಕೆಲವು ಗೌರ್ನರು ಕಳ್ಳಸಾಗಾಣಿಕೆಗಾರರೊಡನೆ ಸಂಬಂಧಹೊಂದಿರುವರೆಂದು ಶ್ರೀ ಭೂಪೇಶಗುಪ್ತರು ರಾಜ್ಯಸಭೆಯಲ್ಲಿ ಮತ್ತೆ ಆರೋಪಿಸಿದರು – ಕಳ್ಳಸಾಗಾಣಿಕೆಗಾರರ ಪೋಷಕರನ್ನು ಸರಕಾರ ಸಂರಕ್ಷಿಸುತ್ತಿದೆ ಎಂದು ಆಪಾದಿಸಿದರು – ಕಳ್ಳಸಾಗಾಣಿಕೆಗಾರರ ಬೆಂಬಲಿಗರಾದ ಗೌರ್ನರರ, ರಾಜಕಾರಣಿಗಳು, ಉನ್ನತ ಸರಕಾರಿ ಅಧಿಕಾರಿಗಳ ಮೇಲೆ, ಸರಕಾರ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕೇಳಿದರು – ಸರಕಾರದ ಉತ್ತರವಿಲ್ಲ

ಸವಾಲಿಗೆ ಸಿದ್ಧ

ಪಾಟ್ನಾ — ಗಾಂಧಿ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಸೇವನದ ಹಾಜರಾಗಿದ್ದ ದಾಖಲಾತಿಯಷ್ಟು ಜನರನ್ನು ಕಂಡು ಶ್ರೀ ಜಯಪ್ರಕಾಶನಾರಾಯಣರು ಸ್ವಲ್ಪ ಹೊತ್ತು ಬಿಕ್ಕಿಬಿಕ್ಕಿ ಅತ್ತರು ; ಅಲ್ಲದ್ದ 70 ವರ್ಷಗಳಿಗೆ ಮೇಲ್ಪಟ್ಟ ಬಹುಮಂದಿ ಇಷ್ಟು ಭಾರಿ ಸಭೆ ಎಂದೂ ನಡೆದಿಲ್ಲವೆಂದು ಹೇಳುತ್ತಿದ್ದರು.

ಜಯಪ್ರಕಾಶರು ಮಾಡಿದ ಭಾಷಣದಲ್ಲಿ– ಮುಂದಿನ ಚುನಾವಣೆಯಲ್ಲಿ, ಜನತಾ ತೀರ್ಪು ಪಡೆಯಲೆಂದು ಪ್ರಧಾನಿ ಇಂದಿರಾರವರು ಹಾಕಿರುವ ಸವಾಲನ್ನು ತಾವು ಅಂಗೀಕರಿಸುವುದಾಗಿ ಹೇಳಿದರು – ಪ್ರಧಾನಿಯವರು ಚುನಾವಣೆಯನ್ನು ಎದುರುಬದುರಾಗುವ ಸಮರಭೂಮಿ ಮಾಡುವ ಕರೆ ಕೊಟ್ಟಿರುವುದರಿಂದ, ಅವರು 'ಭ್ರಷ್ಟಾಚಾರ ವಿರುತನ ಹೈ. ನಯಾ ಬೀಹಾರ್ ಬನಾನ ಹೈ' ಎಂಬ ಜನತಾವಾಣಿಯನ್ನು ಕೇಳುವರೆಂದು ಹೇಳಿದರು – ಈ ಸ್ಪರ್ಧೆಯಲ್ಲಿ ಎಡದೇ ಪಕ್ಷಗಳು, ಒಂದು ಕಾಣೆ ಜನರು, ವಿದ್ಯಾರ್ಥಿಗಳು, ಯುವಕರು, ಎದುರುಕಡೆ ಕಾಂಗ್ರೆಸ್, ಸಿಪಿಐ, ಎಂದು ಹೇಳಿದರು – ನಾನು ಉಮೇದುವಾರನಾಗುವುದಿಲ್ಲವೆಂದೂ ಅದರೆ ಖಂಡಿತವಾಗಿ ನಾಯಕನಾಗುವೆ. ಜನರ, ವಿದ್ಯಾರ್ಥಿಗಳ, ಯುವಕರ ಮುಖಂಡನಾಗುವೆನೆಂದು ಹೇಳಿದರು – ಬೀಹಾರು ಮತ್ತು ದೇಶವು ತಪ್ಪು ಹಾದಿಗೆ ಎಳೆಯಲ್ಪಟ್ಟು, ಪ್ರಜಾಪ್ರಭುತ್ವ ಬಲಹೀನಗೊಳ್ಳುತ್ತಿದೆಯೆಂದು ಹೇಳಿದರು

ತಿದ್ದುಪಡಿ

ಹಿಂದಿನ ಪುಟದಲ್ಲಿ ಪ್ರಕಟವಾಗಿರುವ ಟೆಂಡರ್ ಪ್ರಕಟನೆ ಜಾಹೀರಾತಿನಲ್ಲಿ ಕೆಲಸದ ಹೆಸರು ಕಾಲಂ ಕೆಳಗೆ " ಹಟ್ಟನಹಳ್ಳಿ ಮಾದಾಪುರ ರಸ್ತೆ.... ' ಎಂದು ಮುದ್ರಣವಾಗಿರುವುದನ್ನು " ಚಟ್ಟನಹಳ್ಳಿ ಮಾದಾಪುರ ರಸ್ತೆ.... " ಎಂದು ಓದಿಕೊಳ್ಳಬೇಕಾಗಿ ವಿನಂತಿ

ಸಭಾಪರಿತ್ಯಾಗ

ನವದೆಹಲಿ– ಎಂಪಿಎಸ್‌ಇ ಮೇರಿದಸ್ತಗಿರಿ ಮಾಡಲ್ಪಟ್ಟವರು ಕಳ್ಳಸಾಗಾಣಿಕೆಗಾರರು ಕೋರ್ಟಿಗೆ ಗೈರಾಗದನ್ನು ಪ್ರತಿಬಂಧಿಸುವ ಅಧ್ಯಕ್ಷರ ಆಜ್ಞೆಯನ್ನು ಲೋಕಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಕಟುವಾಗಿ ಟೀಕಿಸಿ, ಸಭಾಪರಿತ್ಯಾಗಮಾಡಿದರು

★

ಅಧ್ಯಕ್ಷರ ಆಜ್ಞೆ ವಿರುದ್ಧ

ಬೊಂಬಾಯಿ— ಆಂತರಿಕ ರಕ್ಷಣಾ ಶಾಸನ ತಿದ್ದುಪಡಿಯ ಅಧ್ಯಕ್ಷರ ಆಜ್ಞೆಯ ನ್ಯಾಯಬದ್ಧತೆ ಪ್ರಶ್ನಿಸಿ ಬೊಂಬಾಯಿ ಹೈಕೋರ್ಟಿನಲ್ಲಿ ಡೆಟನ್ಯೂ ಪ್ರಯಾಸಾಹೇಬ್ ರಾಣಾ ಪತ್ನಿ ಮುಂತಾದ್ ಅರ್ಜಿ ಹಾಕಿರುವಳು

●

ಭಾರಿ ಪ್ರತಿಭಟನೆ

ಜಯಪುರ— ರಾಜಸ್ಥಾನ ಕಾಂಗ್ರೆಸ್ ಸಮಿತಿಯು ಜಯಪ್ರಕಾಶ ಚಳವಳಿ ವಿರುದ್ಧ ಏರ್ಪಡಿಸಿದ್ದ ಪ್ರತಿಭಟನೆಯು ಸಾಮೂಹಿಕ ಮತ್ತು ಪರ್ಣರಂಜಿತವಾಗಿತ್ತು – ಅದರ ಎರಡನೆ ಉದ್ದೇಶವು, ದಾಸ್ತಾನು ಗಾರರು, ಲಾಭಬಡುಕರು, ಕಳ್ಳಪೇಟೆಯವರು ಮತ್ತು ಅಕ್ರಮಸಾಗಾಣಿಕೆಗಾರರನ್ನು ಹೊರಪಡಿಸುವಷ್ಟಾಗಿತ್ತು – ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು – ಕಾಂಗ್ರೆಸ್ ಕಾರ್ಯಕರ್ತರನ್ನು 800 ಬಸ್ಸುಗಳಲ್ಲಿ, 1600 ಟ್ರಕ್ಕುಗಳಲ್ಲಿ 700 ಟ್ರಾಕ್ಟರುಗಳಲ್ಲಿ ತರಲಾಗಿತ್ತು.

★

ಕೇಂದ್ರದ ನೆರವು ಕೇಳಿಕೆ

ನವದೆಹಲಿ– ಅಭಾವ ಮತ್ತು ಪ್ರವಾಹ ಪರಿಸ್ಥಿತಿಗಾಗಿ ಈ ವರ್ಷ 13 ರಾಜ್ಯಗಳು ಕೇಂದ್ರದಿಂದ ಒಟ್ಟು ರೂ 250 ಕೋಟಿ ನೆರವು ಕೇಳಿವೆ – ಈ ಪೈಕಿ ಕರ್ನಾಟಕದ ಕೇಳಿಕೆ ರೂ. 3 ಕೋಟಿ.

ಮುಖ್ಯ ಮಂತ್ರಿಗಳ ಹಿತೋಕ್ತಿ

ಶಿವಮೊಗ್ಗದಲ್ಲಿ ಹೊಸ ಜಿಲ್ಲಾ ಪೋಲೀಸ್ ಕಟ್ಟಡವನ್ನು ಪ್ರಾರಂಭಿಸುತ್ತಾ, ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ಭಾಷಣ ಮಾಡಿ, ಪೋಲೀಸರು ತಮ್ಮ ಕರ್ತವ್ಯವನ್ನು ನಿಸ್ಪಕ್ಷಪಾತವಾಗಿ ಮಾಡಬೇಕೆಂದು ತಿಳಿಸಿದರು.

★

ದಿವ್ಯವಾಣಿ

ಸಾತ್ತಂಕ್ಯ ಸೂರ್ಯನು ಮುಳುಗಿದನು. ನೀವು ಕ್ಷೇಗಾರಿಕೆ ಮಾತ್ರ ವಿಷವ್ಯಯ ನೋಡದ ಬತ್ತಿ ಹೊತ್ತಿಸಿಕೊಳ್ಳಬೇಕು. — ಬೆಂಜಮಿನ್ ಫ್ರಾಂಕ್ಲಿನ್

ಕರ್ನಾಟಕ ಪಿ ಡಬ್ಲ್ಯೂ ಡಿ ಮೈಸೂರು ವಿಭಾಗ, ಮೈಸೂರು

ಟೆಂಡರ್ ಪ್ರಕಟಣೆ

ತಾರೀಖು 26-10-1974

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕರ್ನಾಟಕ ಪೋಷೋಪಜೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ 3 ಮತ್ತು ಮೇಲ್ಪಟ್ಟ ವರ್ಗದ ಕಂಟ್ರಾಕ್ಟರ್‌ಗಳಿಂದ ಕೆಲಸದ ಹೆಸರು ಬರೆದ ಮೊಹರಾದ ದ್ವಿಪ್ರತಿ ಟೆಂಡರ್‌ಗಳನ್ನು ವಿಧಾಯಕವಾದ ಫಾರಂನಲ್ಲಿ ಆಹ್ವಾನಿಸಲಾಗಿದೆ ಮತ್ತು ಅವನ್ನು, ಎಕ್ಸಿಕ್ಯುಟೀವ್ ಇಂಜಿನಿಯರ್ ರವರು 27-11-1974 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸುವರು ಸಾಧ್ಯವಾದಷ್ಟು ಅದೇ ದಿನ ಅವನ್ನು ಒಪ್ಪಿಸಲಾಗುವುದು ಕಚೇರಿ ಕಾಲಗಳಲ್ಲಿ ಕೆಲಸದ ದಿನಗಳಲ್ಲಿ 25-11-1974 ಮತ್ತು 26-11-1974 ರಂದು ಎರಡು ಫಾರಂಗಳ ಒಂದು ಸೆಟ್‌ಗೆ ರೂ. 5/- ಪಾವತಿ ಮಾಡಿದಲ್ಲಿ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಕೆಲಸ ಮುಗಿಸಲು ಕಾಲಾವಧಿ ಹತ್ತು ತಿಂಗಳುಗಳು. ಹೆಚ್ಚು ವಿವರಗಳನ್ನು ಮೈಸೂರು - 5 ರಲ್ಲಿರುವ, ಮೈಸೂರು ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಪಡೆಯಬಹುದು.

ಸಂ	ಕೆಲಸದ ಹೆಸರು	(ಟೆಂಡರ್‌ಗೆ ಇಟ್ಟ ರುಪಾಯಿ) ಅಂದಾಜು ಹಣ	ಇ ಎಂ ಡಿ	ಭದ್ರತಾ ಠೇವಣಿ
1	ನಂಜನಗೂಡು ತಾಲ್ಲೂಕಿನ ಘಟ್ಟನಹಳ್ಳಿ ಮಾದಾಪುರ ರಸ್ತೆಯ ಮೇಲೆ ಹೈಲೆವಲ್ ಕಾಸುವೆ ನಿರ್ಮಿಸುವುದು.	99200	2480	4960

ದ್ವಿಪ್ರತಿ ಟೆಂಡರ್‌ಗಳೊಡನೆ ಕಂಟ್ರಾಕ್ಟರ್‌ಗಳು ತಮ್ಮ ರಿನ್ಯೂಯಲ್ ರಿಜಿಸ್ಟ್ರೇಷನ್ ಪ್ರತಿಯನ್ನು ಕೊಡಬೇಕು ಅವಶ್ಯವಾದರೂ ಸ್ಥಾಯಿ ಠೇವಣಿ ಕೊಟ್ಟಿದ್ದರೆ (2 ಮತ್ತು 1 ನೇ ವರ್ಗದ ಕಂಟ್ರಾಕ್ಟರ್‌ಗಳ ಸಂದರ್ಭದಲ್ಲಿ ನೋಡಿ) ಇ. ಎಂ ಡಿ ವಿನಾಯಿತಿ ಪ್ರತಿಯನ್ನು ಟೆಂಡರ್ ಹಾಕುವ ಕಾಲದಲ್ಲಿ ಮತ್ತು ದ್ವಿಪ್ರತಿ ಟೆಂಡರ್‌ಗಳೊಡನೆ ರಿನ್ಯೂಯಲ್ ರಿಜಿಸ್ಟ್ರೇಷನ್ ಪ್ರತಿಯನ್ನು ಲಗತ್ತಿಸಬೇಕು.

ಟೆಂಡರ್ ಒಪ್ಪಿಕೊಳ್ಳಲು ತಕ್ಕ ಅಧಿಕಾರವಿರುವ ಅಧಿಕಾರಿಯವರಿಗೆ ಯಾವ ಕಾರಣವನ್ನು ಕೊಡದೆ ಟೆಂಡರ್ ನಿರಾಕರಿಸುವ ಹಕ್ಕು ಮೀಸಲಾಗಿದೆ.

ಸಹಿ/- ಟಿ ಕೆ ಶಂಕರಪ್ಪ,
ಎಕ್ಸಿಕ್ಯುಟೀವ್ ಇಂಜಿನಿಯರ್, ಮೈಸೂರು ವಿಭಾಗ.

Quality Printing . Neat Binding

Lakshminarasimha Press

Sivarampet, Mysore 1

Protect the Cow

ವುಡ್‌ಲಾಂಡ್ 15 11 74 ರಿಂದ

ಅಮೋಘ 2 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೧೧ ಪ್ರದರ್ಶನಗಳು

ಅಪೆರಾ 15 11 74 ರಿಂದ

ಜುಮೊನ್ ಆಸ್‌ಮಾನ್

ಅಶೋಕ ಕಾಮಾರ್ ಸುನಿಲ್ ದತ್
ರೇಖ ಯೋಗಿತ ಬಾಲಿ ಅಭಿನಯಿಸಿರುವ
ಅಮೋಘ ಹಿಂದಿ ಚಿತ್ರ

ಸಂಗೀತ – ಕಿಶೋರ್ ಕುಮಾರ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore